560

13102

# ಪ್ರಥಮ ಸೆಮಿಸ್ಟರ್ ಬಿ.ಸಿ.ಎಚ್.ಎನ್./ಬಿ.ಕಾಂ./ಬಿ.ಸಿ.ಎಸ್.ಪಿ./ಬಿ.ಸಿ.ಟಿ.ಟಿ. ಪರೀಕ್ಷೆ, ಡಿಸೆಂಬರ್ 2018

(ಸಿ.ಬಿ.ಸಿ.ಎಸ್. ಸ್ಕೀಮ್)

ಭಾಷಾ ಕನ್ನಡ

## ಕನ್ನಡ ಭಾಷಾ ಪತ್ಯ – I

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 70

I. ಅ) ಈ ಕೆಳಗಿನ ಪದ್ಯದ ಭಾವಾರ್ಥ ಬರೆಯಿರಿ. **(1×6=6)**

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ ಬಡವನಯ್ಯ
ಎನ್ನ ಕಾಲೆ ಕಂಬ ದೇಹವೇ ದೇಗುಲ
ಶಿರವೇ ಹೊನ್ನ ಕಳಶವಯ್ಯ
ಕೂಡಲ ಸಂಗಮ ದೇವಾ ಕೇಳಯ್ಯ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ

ಆ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×2=4)**

ರನ್ನ, ಬಸವಣ್ಣ, ಕುವೆಂಪು, ಚಂದ್ರಶೇಖರ ಕಂಬಾರ.

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1×10=10)**

1) ಬಸವಣ್ಣನವರ ಸ್ಥಾವರ–ಜಂಗಮ ಪರಿಕಲ್ಪನೆಯನ್ನು ವಿವರಿಸಿ.
2) ದೇವರು ಮತ್ತು ಪೂಜಾರಿ ಕವಿತೆಯ ಆಶಯವನ್ನು ಕುರಿತು ಚರ್ಚಿಸಿ.

II. ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(2×5=10)**

1) ಹಳೆಮನೆ ರಿಪೇರಿಯ ಸ್ವಾರಸ್ಯ.
2) ಪೋಲೀಸರು ರೈಲ್ವೆ ನಿಲ್ದಾಣ ಪ್ರವೇಶಿಸಿದ್ದರಿಂದ ಎದುರಾದ ಪರಿಸ್ಥಿತಿ.
3) ಸಾಹುಕಾರ ದೇವೀರಯ್ಯನವರ ವ್ಯಕ್ತಿತ್ವ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1×10=10)**

1) ಹಾವು, ಸುಂಡಿಲಿ, ದನ, ಮಂಗ ಹೇಗೆ ಇವು ಬರ್ಮಚಾರಿಯ ಮನಸ್ಸಿನ ಅತೃಪ್ತ ಭಾವನೆಗಳ ಸಂಕೇತ ವಿವೇಚಿಸಿ.
2) ಚಿಕ್ಕರಾಮ ಮತ್ತು ಪುಟ್ಟಸ್ವಾಮಿ ನಡುವಿನ ಅನ್ಯೋನ್ಯತೆಯನ್ನು ಕುರಿತು ಬರೆಯಿರಿ.

P.T.O.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. (1×5=5)

1) ಧೀರ ಕುಮಾರ ಬಿಳಿ ಆನೆಯನ್ನು ತಂದುದು.

2) ಥ್ಯಾಕರೆ ಸಾಹೇಬ ಕಿತ್ತೂರಿನ ಮೇಲೆ ಕೋಪಗೊಳ್ಳಲು ಕಾರಣ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ಕಿತ್ತೂರಿನ ದಂಡು ಬ್ರಿಟಿಷರ ವಿರುದ್ಧ ಸೆಣಸಿದ ರೀತಿಯನ್ನು ವಿವರಿಸಿ.

2) ಕಿಳ್ಳೆಕ್ಯಾತರು ಯಾರು ? ತೊಗಲುಗೊಂಬೆ ಆಟದಲ್ಲಿ ಅವರ ಪಾತ್ರವನ್ನು ವಿಶ್ಲೇಷಿಸಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. (1×5=5)

1) ಪ್ರಾಚೀನ ಕಾಲದಲ್ಲಿ ಗ್ರಂಥ ಪ್ರಸಾರದ ಸ್ವರೂಪ.

2) ಅಂಕಣ ಸಾಹಿತ್ಯ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) " ಪ್ರಬಂಧವು ಸಾಹಿತ್ಯವೆಂದಾದರೆ, ಅಂಕಣ ಬರಹವೂ ಸಾಹಿತ್ಯವೆ " ಈ ಹೇಳಿಕೆಯನ್ನು ಸಮರ್ಥಿಸಿ.

2) ಮರೆಯಾಗುತ್ತಿರುವ ಸಾಮಾಜಿಕ ಹೊಣೆಗಾರಿಕೆಯನ್ನು ಪಠ್ಯದ ಹಿನ್ನೆಲೆಯಲ್ಲಿ ವಿವರಿಸಿ.

---